## ನಿಮ್ಮೊಡನೆ

# ಅಪ್ರಾಪ್ತರ ವಾಹನ ಚಾಲನೆಗೆ ಬೇಕು ಕಡಿವಾಣ ಪೋಷಕರ ಮುದ್ದು ಮಕ್ಕಳಿಗೆ ಕುತ್ತಾಗಬಾರದು

> ವ್ಹೀಲಿಂಗ್ ಪುಂಡರು ಎದುರಾದಾಗಲೆಲ್ಲ ಪೋಷಕರು ಹಾಗೂ ನಾಗರಿಕರೇ ಸಾರ್ವಜನಿಕ ಸಭ್ಯತೆಯ ಪಾಠ ಹೇಳಿಕೊಡಬೇಕಾಗಿದೆ. ವ್ಹೀಲಿಂಗ್ ಎನ್ನುವುದು ಸಾಹಸಪ್ರವೃತ್ತಿಯಲ್ಲ; ಅದೊಂದು ಅಸಹ್ಯ ಹಾಗೂ ಅಪಾಯಕರ ಸಾರ್ವಜನಿಕ ನಡವಳಿಕೆ.

ತಂತಿಯ ಮೇಲೆ ನಡೆಯುವ ಸರ್ಕಸ್ ಕಂಪನಿಯ ಹುಡುಗಿಯರಂತೆ, ಒಂಟಿ ಚಕ್ರದಲ್ಲಿ ವಾಹನ ಚಲಾಯಿಸುವ ಹುಡುಗರು ಹೆದ್ದಾರಿಗಳಲ್ಲಿ ಅಲ್ಲಲ್ಲಿ ಎಡತಾಕುತ್ತಾರೆ. ತಂತಿಯ ಮೇಲಿನ ನಡಿಗೆ ಹೊಟ್ಟೆಪಾಡಿನ ಮಾರ್ಗವಾದರೆ, ಒಂಟಿ ಚಕ್ರದಲ್ಲಿ ವಾಹನವನ್ನು ಚಲಾಯಿಸುವ 'ವ್ಹೀಲಿಂಗ್' ಆತ್ಮಹತ್ಯೆ ಪ್ರಯತ್ನದಂತಹದ್ದು ಹಾಗೂ ಇತರರ ಜೀವವನ್ನೂ ಅಪಾಯಕ್ಕೆ ಒಡ್ಡುವಂತಹದ್ದು. ಬೇಜವಾಬ್ದಾರಿ ನಾಗರಿಕ ವರ್ತನೆಯಾದ ವ್ಹೀಲಿಂಗ್ ಅಪಾಯಕರ ಮಾತ್ರವಲ್ಲ, ಕಾನೂನುಬಾಹಿರ ಕೂಡ.

ವ್ಹೀಲಿಂಗ್‌ನಲ್ಲಿ ತೊಡಗುವ ಬಹುತೇಕ ಯುವಕರು ಅಪ್ರಾಪ್ತ ವಯಸ್ಕರು. ವಾಹನ ಚಲಾಯಿಸಲು ಪರವಾನಗಿ ಇಲ್ಲದ ಮಕ್ಕಳು ದ್ವಿಚಕ್ರ ವಾಹನಗಳನ್ನು ಎಗ್ಗಿಲ್ಲದೆ ಚಲಾಯಿಸುವ ತಪ್ಪಿನಲ್ಲಿ ಪೋಷಕರ ಪಾತ್ರವೂ ಇದೆ. ಕಾಳಜಿ ಹಾಗೂ ಪ್ರೀತಿಯ ರೂಪದಲ್ಲಿ ಮಕ್ಕಳಿಗೆ ಸ್ಕೂಟರ್, ಕಾರು ಕೊಡಿಸುವ ಪೋಷಕರಿದ್ದಾರೆ. ಪಾಲಕರ ಅಂತಸ್ತಿನ ಹಮ್ಮು ಕೂಡ ಕೆಲವೊಮ್ಮೆ ಬೇಜವಾಬ್ದಾರಿ ನಡವಳಿಕೆಗೆ ಕಾರಣವಾಗುತ್ತದೆ. ಈ ವಿವೇಚನಾರಹಿತ ಕಾಳಜಿ, ಪ್ರೀತಿ ಮಕ್ಕಳ ಜೀವಕ್ಕೆ ಕುತ್ತಾಗುವಷ್ಟು ದುಬಾರಿಯಾಗಿ ಪರಿಣಮಿಸಿರುವ ಉದಾಹರಣೆಗಳಿವೆ. ಹುಚ್ಚುಖೋಡಿ ವಯಸ್ಸಿನ ಎಳೆಯರಿಗೆ ವಾಹನ ಸಿಕ್ಕಾಗ ಸಾಹಸ ಪ್ರವೃತ್ತಿ ಅವರಲ್ಲಿ ಇದ್ದಕ್ಕಿದ್ದಂತೆ ಜಾಗೃತಗೊಳ್ಳುತ್ತದೆ. ಪರವಾನಗಿ ಇಲ್ಲದೆ ವಾಹನ ಚಲಾಯಿಸುವುದರ ಜೊತೆಗೆ, ಹೆಲ್ಮೆಟ್ ಧರಿಸದಿರುವ ಹಾಗೂ ಸಂಚಾರ ನಿಯಮಗಳನ್ನು ಉಲ್ಲಂಘಿಸುವ ತಪ್ಪುಗಳೂ ಸಾಮಾನ್ಯ ಎನ್ನುವಂತಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯಲ್ಲಿ ಪುಂಡರ ವ್ಹೀಲಿಂಗ್ ಕಿಡಿಗೇಡಿತನದಲ್ಲಿ ಯುವತಿಯೊಬ್ಬಳು ಬೈಕ್‌ನಿಂದ ಬಿದ್ದು ಸಾವನ್ನಪ್ಪಿದ್ದ ಘಟನೆ ಕಳೆದ ವರ್ಷ ನಡೆದಿತ್ತು. ವ್ಹೀಲಿಂಗ್ ಮಾಡುತ್ತಿದ್ದ ಯುವಕ ಆಯತಪ್ಪಿ ಮತ್ತೊಂದು ಬೈಕ್‌ಗೆ ಡಿಕ್ಕಿ ಹೊಡೆದು ಸಾವಿಗೀಡಾದ ದುರ್ಘಟನೆ ದೇವನಹಳ್ಳಿ ಸಮೀಪ ನಡೆದಿತ್ತು. ಇಂಥ ಅವಘಡಗಳು ಮರುಕಳಿಸುತ್ತಿದ್ದರೂ ವ್ಹೀಲಿಂಗ್ ಗೀಳು ಕಡಿಮೆಯಾಗಿಲ್ಲ. ಹೆದ್ದಾರಿಗಳಲ್ಲಿ ಮಾತ್ರವಲ್ಲದೆ, ಊರುಕೇರಿಗಳ ಇಡುಕಿರಿದ ರಸ್ತೆಗಳಲ್ಲೂ ಒಂಟಿ ಚಕ್ರದಲ್ಲಿ ಗಾಡಿ ಓಡಿಸುವ ಅವಿವೇಕಿಗಳು ಕಾಣಸಿಗುತ್ತಾರೆ. ವ್ಹೀಲಿಂಗ್ ಮಾಡುವುದನ್ನು ಚಿತ್ರೀಕರಿಸಿಕೊಂಡು, ಆ ದೃಶ್ಯಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಿ ತಮ್ಮ ಸಾಹಸಕೃತ್ಯಗಳ ಬಗ್ಗೆ ಸಂಭ್ರಮಿಸುವ ಲಜ್ಜೆಗೇಡಿಗಳೂ ಇದ್ದಾರೆ.

ಮಕ್ಕಳು ದ್ವಿಚಕ್ರ ವಾಹನ ಅಥವಾ ಕಾರಿನಲ್ಲಿ ಬರುವುದನ್ನು ಬಹುತೇಕ ಕಾಲೇಜುಗಳು ಪ್ರೋತ್ಸಾಹಿಸುವುದಿಲ್ಲ. ಕಾಲೇಜಿನ ಆಡಳಿತ ಮಂಡಳಿಯ ಕಿವಿಮಾತುಗಳನ್ನು ನಿರ್ಲಕ್ಷಿಸಿ, ಮಕ್ಕಳಿಗೆ ವಾಹನಗಳನ್ನು ಕೊಡಿಸುವ ಪೋಷಕರಿದ್ದಾರೆ. ಚಾಲನಾ ಪರವಾನಗಿ ಇಲ್ಲದೆ ವಾಹನ ಚಲಾಯಿಸಲು ಅವಕಾಶ ಕಲ್ಪಿಸುವ ಮೂಲಕ, ಎಳೆಯರು ಕಾನೂನು ಉಲ್ಲಂಘಿಸಲು ಹಿರಿಯರೇ ಪ್ರೋತ್ಸಾಹಿಸುತ್ತಿದ್ದಾರೆ. ಅಪಘಾತಗಳ ಸಾಧ್ಯತೆಯ ಅರಿವಿದ್ದೂ ಮಕ್ಕಳ ಜೀವವನ್ನು ಪಣಕ್ಕೊಡ್ಡುವ ಪ್ರವೃತ್ತಿ ಸರಿಯಾದುದಲ್ಲ. ಪೋಷಕರು ತಮ್ಮ ಸ್ವಂತ ವಾಹನಗಳಲ್ಲಿ ಮಕ್ಕಳನ್ನು ಶಾಲೆ ಕಾಲೇಜುಗಳಿಗೆ ಬಿಡುವುದಕ್ಕೆ ಯಾರ ತಕರಾರೂ ಇಲ್ಲ. ಆದರೆ, ಮಕ್ಕಳನ್ನೇ ವಾಹನ ಚಲಾಯಿಸಲು ಬಿಡುವುದು ಯಾವ ರೀತಿಯಿಂದಲೂ ಸರಿಯಲ್ಲ.

ಜೀವಕ್ಕೆ ಸಂಚಕಾರ ತರುವ ಹಾಗೂ ಸುಗಮ ಸಂಚಾರಕ್ಕೆ ಅಡ್ಡಿಯುಂಟು ಮಾಡುವ ವ್ಹೀಲರ್‌ಗಳಿಗೆ ಕಡಿವಾಣ ಹಾಕಲು ಪೊಲೀಸರು ಕ್ರಮ ಕೈಗೊಳ್ಳುತ್ತಿದ್ದಾರೆ. ವ್ಹೀಲಿಂಗ್ ಮಾಡುವವರನ್ನು ಆಧುನಿಕ ತಂತ್ರಜ್ಞಾನ ಬಳಕೆಯಿಂದ ಗುರ್ತಿಸಿ, ದಂಡ ವಿಧಿಸುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿನ ಪೋಸ್ಟ್‌ಗಳನ್ನು ಗಮನಿಸಿಯೂ ವ್ಹೀಲರ್‌ಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ, ಕಾನೂನು ಉಲ್ಲಂಘನೆಯನ್ನೇ ಸಾಧನೆಯೆಂದು ತಿಳಿಯುವ ಪುಂಡರಿಗೆ ಯಾವ ಕ್ರಮ ತಾನೇ ನಾಟೀತು? ವ್ಹೀಲಿಂಗ್ ಪುಂಡರು ಎದುರಾದಾಗಲೆಲ್ಲ ಪೋಷಕರು ಹಾಗೂ ನಾಗರಿಕರೇ ಸಾರ್ವಜನಿಕ ಸಭ್ಯತೆಯ ಪಾಠ ಹೇಳಿಕೊಡಬೇಕಾಗಿದೆ, ತರಾಟೆಗೆ ತೆಗೆದುಕೊಳ್ಳಬೇಕಾಗಿದೆ.

ಸಾರ್ವಜನಿಕ ಸಾರಿಗೆಯನ್ನು ಬಳಸುವಂತೆ ಮಕ್ಕಳನ್ನು ಪ್ರೋತ್ಸಾಹಿಸುವುದು ಎಳೆಯರ ದೃಷ್ಟಿಯಿಂದ ಮಾತ್ರವಲ್ಲದೆ, ಸಾಮಾಜಿಕ ಆರೋಗ್ಯಕ್ಕೂ ಹಿತಕರ. ಮಕ್ಕಳಿಗೆ ಸಾಮಾಜಿಕ ಜೀವನವನ್ನು ಪರಿಚಯಿಸುವುದು ಹಾಗೂ ಸಮಾಜದಲ್ಲಿನ ಬಹುತ್ವದ ಅರಿವು–ಅನುಭವ ಮೂಡಿಸುವುದು ಶಾಲಾ ಕಾಲೇಜುಗಳ ಪ್ರಮುಖ ಉದ್ದೇಶಗಳಲ್ಲೊಂದು. ಈ ಉದ್ದೇಶಕ್ಕೆ ಪೂರಕವಾಗಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯೂ ಕೆಲಸ ಮಾಡುತ್ತದೆ. ಸಮೂಹ ಸಾರಿಗೆ ವ್ಯವಸ್ಥೆ ಹೊಂದಾಣಿಕೆ ಮನೋಭಾವ ಹಾಗೂ ತಾಳ್ಮೆಯ ಗುಣಗಳನ್ನು ಬೆಳೆಸುವುದರ ಜೊತೆಗೆ ಉಳಿತಾಯದ ಮಾರ್ಗವೂ ಹೌದು.

ಸಾರ್ವಜನಿಕ ಸಾರಿಗೆಯ ಸವಲತ್ತು ಇಲ್ಲದೇ ಹೋದಲ್ಲಿ ಅಥವಾ ಮಕ್ಕಳಿಗೆ ಸ್ವಂತ ವಾಹನ ಕೊಡಿಸಲೇಬೇಕು ಎಂದಿದ್ದಲ್ಲಿ ಸೈಕಲ್ ಬಳಕೆಯನ್ನು ಉತ್ತೇಜಿಸಬಹುದು. ಸೈಕಲ್ ತುಳಿಯುವುದು ವೈಯಕ್ತಿಕ ಆರೋಗ್ಯಕ್ಕೆ ಪೂರಕ, ಪರಿಸರಕ್ಕೂ ಹಿತಕರ. ಆದರೆ, ಸೈಕಲ್‌ನಲ್ಲಿ ವ್ಹೀಲಿಂಗ್ ಮಾಡುವುದೂ ಸರಿಯಲ್ಲ. ವ್ಹೀಲಿಂಗ್ ಎನ್ನುವುದು ಸಾಹಸಪ್ರವೃತ್ತಿಯಲ್ಲ; ಅದೊಂದು ಅಸಹ್ಯ ಹಾಗೂ ಅಪಾಯಕರ ಸಾರ್ವಜನಿಕ ನಡವಳಿಕೆಯಾಗಿದೆ.

**■ ರಘುನಾಥ ಚ.ಹ.**



ಈಶ್ವರ್